**ಮದುವೆಯಾಗಿ ಗಂಡನ ಮನೆಗೆ ಹೋಗುವ ಮಗಳಿಗೆ ಸೊಗಸಾದ ಒಂದು ಕೌದಿಯನ್ನು ಕೊಡುತ್ತಾರೆ. ಗಂಡನ ಮನೆಯಲ್ಲಿ ತವರು ನೆನಪಾದಾಗ ಬೆಚ್ಚಗೆ ಕೌದಿ ಹೊದೆದುಕೊಂಡರೆ ಸಾಕು, ಅಪ್ಪ–ಅಮ್ಮ, ಅಣ್ಣ–ತಂಗಿ ಎಲ್ಲರೂ ಮೈಸವರಿ ಸಮಾಧಾನ ಮಾಡಿದ ಭಾವ ಹೆಣ್ಣುಮಗಳಿಗೆ ಬರುತ್ತದೆ. ಮನೆಮಗಳು ಮಗುವನ್ನು ಹಡೆದು ಬಾಣಂತನವನ್ನು ಮುಗಿಸಿಕೊಂಡು ವಾಪಾಸು ಹೋಗುವಾಗಲೂ, ತೊಟ್ಟಿಲಿನ ಜೊತೆಗೆ ಆಕೆಗೊಂದು ದೊಡ್ಡ ಕೌದಿ, ಆಕೆಯ ಮಗುವಿಗೊಂದು ಪುಟಾಣಿ ತೊಟ್ಟಿಲು ಕೌದಿ, ದುಪ್ಪಟಿ ಕೊಡುತ್ತಾರೆ.**

ಮೀರಿದ್ದಲ್ಲವೆ? ಧರ್ಮವೆನ್ನುವುದು ಗಂಡಸರ ಹಿಡಿತದಲ್ಲಿದ್ದರೂ ಹೆಂಗಸರಿಗೆ ಸಂಬಂಧಿಸಿದ ಹಲವಾರು ಆಚರಣೆಗಳು ಸಂಪ್ರದಾಯದಲ್ಲಿ ಇದ್ದೇ ಇವೆಯಲ್ಲವೆ? ಅವುಗಳಲ್ಲಿ ಕೌದಿ ವಿಶೇಷ ಸ್ಥಾನವನ್ನು ಪಡೆಯುತ್ತಾ ಹೋಗಿದೆ. ಮದುವೆಯಾಗಿ ಗಂಡನ ಮನೆಗೆ ಹೋಗುವ ಮಗಳಿಗೆ ಸೊಗಸಾದ ಒಂದು ಕೌದಿಯನ್ನು ಕೊಡುತ್ತಾರೆ. ಗಂಡನ ಮನೆಯಲ್ಲಿ ತವರು ನೆನಪಾದಾಗ ಬೆಚ್ಚಗೆ ಕೌದಿ ಹೊದೆದುಕೊಂಡರೆ ಸಾಕು, ಅಪ್ಪ–ಅಮ್ಮ, ಅಣ್ಣ–ತಂಗಿ ಎಲ್ಲರೂ ಮೈಸವರಿ ಸಮಾಧಾನ ಮಾಡಿದ ಭಾವ ಹೆಣ್ಣುಮಗಳಿಗೆ ಬರುತ್ತದೆ.

ಮನೆಮಗಳು ಮಗುವನ್ನು ಹಡೆದು ಬಾಣಂತನವನ್ನು ಮುಗಿಸಿಕೊಂಡು ವಾಪಾಸು ಹೋಗುವಾಗಲೂ, ತೊಟ್ಟಿಲಿನ ಜೊತೆಗೆ ಆಕೆಗೊಂದು ದೊಡ್ಡ ಕೌದಿ, ಆಕೆಯ ಮಗುವಿಗೊಂದು ಪುಟಾಣಿ ತೊಟ್ಟಿಲು ಕೌದಿ, ದುಪ್ಪಟಿಗಳನ್ನು ಕೊಡುತ್ತಾರೆ. ಬೀಗರು ಬಂದಾಗ ಹೊದೆಯಲು ಅತ್ಯುತ್ತಮ ಕೌದಿಯನ್ನೇ ಕೊಡಬೇಕು, ಮನೆಯ ಟೀಪಾಯಿ ಮೇಜುಗಳ ಮೇಲೆಲ್ಲಾ ಕೌದಿಗಳು ಸಿಂಗರಿಸಿ ಕೂಡಬೇಕು. ಮದುವೆಯಾಗಿ ಹೊಸ್ತಿಲು ತುಳಿದು ಬಂದ ಒಂದು ವರ್ಷದೊಳಗೆ ಮನೆಯ ಸೊಸೆ ಹೊಸ ಕೌದಿಯನ್ನು ಹೊಲಿಯಬೇಕು. ಗೃಹಪ್ರವೇಶಕ್ಕೆ ಹೊಸ ಕೌದಿ ಬೇಕು, ಗರ್ಭ ಕಟ್ಟಿದರೆ–ಕಟ್ಟದಿದ್ದರೆ ಕೌದಿ ಅರಳಬೇಕು – ಈ ರೀತಿ ಕೌದಿ ತನ್ನದೇ ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿದೆ. ಕೆಲವೊಂದು ವೀರಶೈವ ಮಠಗಳಲ್ಲಿ ರೂಢಿಯನ್ನು ಮುರಿದು ವರ್ಷಕ್ಕೊಮ್ಮೆ ಹೊಸ ಕೌದಿಗಳನ್ನೂ ಪೂಜಿಸುವ ಸತ್ಸಂಪ್ರದಾಯವೂ ಬಂದಿದೆ. ಕೌದಿ ಹೊಲಿಯುವಾಗ ಮನೆಯಲ್ಲಿ ಯಾರಾದರೂ ಗರ್ಭಿಣಿ ಇದ್ದರೆ, ಮನೆ ಕಟ್ಟುವ ಕಾರ್ಯ ಜರುಗುತ್ತಿದ್ದರೆ – ಕೌದಿಯ ಹೊಲಿಗೆಯನ್ನು ಪೂರ್ತಿ ಮಾಡುವುದಿಲ್ಲ. ಮಧ್ಯದಲ್ಲಿ ಚೂರು 'ಹೊಟ್ಟೆ' ಬಿಟ್ಟು ಹೊಲಿಯುತ್ತಾರೆ. ಸುಸೂತ್ರವಾಗಿ ಹಡವಣಿಗೆಯಾದರೆ ಅಥವಾ ಯಶಸ್ವಿಯಾಗಿ ಮನೆ ಕಟ್ಟುವ ಕೆಲಸ ಮುಗಿದರೆ, ಆ ಹೊಟ್ಟೆಯೊಳಗೆ ಒಂದಿಷ್ಟು ಹೋಳಿಗೆ ಇಟ್ಟು ಅದನ್ನು ಮುಚ್ಚುವ ವಿಶೇಷ ಸಂಪ್ರದಾಯ ಇದೆ. 'ಹೊಟ್ಟೆ' ತುಂಬಿದ್ದರೆ ನೆಮ್ಮದಿ ಇರುತ್ತದೆ ಎನ್ನುವ ಭಾವ ಈ ಆಚರಣೆಯ ಹಿಂದಿರುವಂತಿದೆ. ಚಂದದ ಚಿತ್ತಾರದ ಹೊಲಿಗೆಯಾಗಿರುವ ಭಾಗವನ್ನು ಒಳಮುಖವಾಗಿ ಹೊದ್ದುಕೊಂಡು ಮಲಗಬೇಕು ಎನ್ನುವುದು ಮತ್ತೊಂದು ಸಂಪ್ರದಾಯ. ಅದನ್ನು ಉಲ್ಟಾ ಮಾಡಿದರೆ ಕೆಟ್ಟ ಕನಸುಗಳು ಬೀಳುತ್ತವೆಂದು ಹೆದರುತ್ತಾರೆ.



## ಕೌದಿ ಪರಂಪರೆ: ಮುಂದೇನು?

'ಈಗಿನ ಮಂದಿಗೆ ಯಾರಿಗೂ ಕೌದಿ ಮಾಡೋ ಉತ್ಸಾಹ, ಶಕ್ತಿ ಇಲ್ಲ ರೀ... ಮಾಡಿದ್ರೂ ಬೀಗರು ಬಂದಾಗ ಅವರಿಗೆ ಕೊಡೋದಕ್ಕೆ ಹಿಂಜರಿತಾರೆ. ಹೊದಿಕೆ ಕೊಳ್ಳೋ ಯೋಗ್ಯತೆ ಇಲ್ಲದ ಜನ ಅಂತ ಎಲ್ಲಿ ಅಂದುಕೋತಾರೋ ಅನ್ನೋ ಅಂಜಿಕೆ' ಎಂದು ಬೆಳಗಾವಿಯಲ್ಲಿ ಪ್ರೇಮ ಬಾಳಿಪಡಿ ಅವರು ಹೇಳುವಾಗ, ಅಪೂರ್ವದ ವಸ್ತುವೊಂದು ಕೈಜಾರುತ್ತಿರುವ ಅಸಹಾಯಕತೆ ಅವರ ಧ್ವನಿಯಲ್ಲಿತ್ತು. ದುಡ್ಡು ಕೊಟ್ಟರೆ ಚಂದದ ಹೊದಿಕೆಗಳು ಅಂಗಡಿಯಲ್ಲಿ ಸಿಗುವ ಈ ಹೊತ್ತಿನಲ್ಲಿ ಮೈಬಗ್ಗಿಸಿ ತಿಂಗಳಾನುಗಟ್ಟಳೆ ಶ್ರಮ ಹಾಕಿ ಕೌದಿ ಮಾಡುವವರು ಯಾರು? ಸದ್ಯಕ್ಕೆ ಕೌದಿ ಹೊಲಿಯುವವರೆಲ್ಲಾ ಎಪ್ಪತ್ತರ ವಯೋಮಾನ ದಾಟಿದವರು ಎಂಬುದು ಗಮನಿಸಿದಾಗ ಅವರ ಮಾತು ಸತ್ಯವೆನ್ನಿಸುತ್ತದೆ. ಬಹುಶಃ ಈ ಕೌದಿ ಹೊಲಿಯುವ ಕಲೆ ನಿಧಾನವಾಗಿ ನಶಿಸಿ ಹೋಗಬಹುದು ಎಂಬ ಕಹಿಸತ್ಯ ಅವರಿಗೆ ಗೊತ್ತಿದೆ ಎನ್ನಿಸುತ್ತಿತ್ತು. ಎಲ್ಲರ ಮನೆಯಲ್ಲಿರುವ ಕೌದಿಗಳೂ ಅವರ ತಾಯಿ, ಅತ್ತೆ ಮುಂತಾದವರು ಮಾಡಿದ ಹಳೆಯವು! ಕೌದಿಯ ಮೇಲೆ ಪ್ರೀತಿ ಇರುವ ಕೆಲವರು, ಇರುವ ಕೌದಿಗಳನ್ನು ಬಳಸಿದರೆ ಎಲ್ಲಿ ಹರಿದು ಹೋಗುತ್ತವೆಯೋ ಎಂದು ಮದುವೆ ರೇಷ್ಮೆಸೀರೆ ಕಾಪಾಡಿದಂತೆ ಬಳಸದೆ ಕಪಾಟಿನಲ್ಲಿಟ್ಟುಕೊಂಡಿದ್ದಾರೆ. ಈಗಿನವರು ಕ್ರೋಶಾ, ಪ್ಯಾಚ್ ವರ್ಕ್, ನೀಡಲ್, ಸೂಜನಿ, ಬಟನ್ ಮೊಲ – ಇತ್ಯಾದಿ ಆಧುನಿಕ ಕುಸುರಿ ಕೆಲಸಗಳ ಕಡೆಗೆ ಹೆಚ್ಚು ಆಸಕ್ತರಾಗುತ್ತಿದ್ದಾರೆ.

ಪ್ರಜಾಪ್ರಭುತ್ವದ ಭಾರತಕ್ಕೆ ಹಲವು ಬಣ್ಣಗಳ, ಹಲವು ಬಟ್ಟೆ ತುಂಡುಗಳ, ಹಲವು ಜಾತಿಯವರ ಸ್ಪರ್ಶಗಳ, ಹಲವು ಹೊಲಿಗೆಗಳ, ಹಲವರ ಕೈಬಿಸುಪು ಕಂಡ ಈ ಬಡವರ ಭಾಗ್ಯದ ಕೌದಿಗಳು ಅತ್ಯಂತ ಸಮರ್ಪಕ ಸಂಕೇತಗಳಾಗಿವೆ. ಆದರೆ ಕಾಲದ ಆರ್ಭಟದಲ್ಲಿ ಏನೇನನ್ನೋ ಕಳೆದುಕೊಂಡ ಅನುಭವ ಭಾರತೀಯರಿಗಿದೆ. ಅದರಲ್ಲಿ ಕೌದಿಯೂ ಕ್ರಮೇಣ ಸೇರಿಕೊಳ್ಳುತ್ತೆನ್ನುವುದು ಕಹಿಸತ್ಯವಾಗಿದೆ.


ಗ್ರಂಥ/ಲೇಖನ ಋಣ:

- ಕೌದಿ – ಬಹುತ್ವದ ಸಂಕೇತ: ಪ್ರಿಯದರ್ಶಿನಿ ಶೆಟ್ಟರ್
- ಗೊಂದಲಿಗರು – ಮಹಿಳಾ ಸಂಸ್ಕೃತಿ: ಡಾ. ವಿಜಯ ಕುಮಾರ ಕಟಗಿಹಳ್ಳಿಮಠ
- ನನ್ನೂರ ಕೌದಿ: ಸಂ. ಜಹಾನ್ ಆರಾ. ಕೋಳೂರು
- ಕೌದಿ–ಕಂಬಳಿ: ವೆಂಕಟೇಶ ಮಾಚಕನೂರು


ಪ್ರತಿಕ್ರಿಯಿಸಿ: feedback@sudha.co.in